ವೀಳ್ಯದೆಲೆಯ ಅಂಬೂ ಅದಕ್ಕೆ ಅಂಟಿಕೊಂಡಂತೆ ಇದ್ದ ಗೆಡ್ಡೆ ಡೇರೆ ಕಾಗ್ಡಾ ಹೂವಿನ ಗಿಡಗಳೂ ಮುದಿ ಕರಿಬೇವಿನ ಮರವೂ ಹೊಳೆ ಬಾಗಿಲಿನ ನೇರಕ್ಕೆ ತೋಟದ ಪುಟ್ಟ ಬದುವಿನ ನಡುವೆ ಕಾಡುಗಲ್ಲುಗಳಿಂದ ಕಟ್ಟಿದ್ದ ಕಲ್ಯಾಣಿಯ ಕಡೆಗೆ ಹರಿದಿದ್ದ ಕಾಲುದಾರಿ, ಹೀಗೆ ಅಲ್ಲಿನ ಸಕಲವೂ ಕಣ್ಣಿಗೆ ದಕ್ಕತೊಡಗಿದವು. ಅದೆಷ್ಟೋ ಹೊತ್ತು ಹಾಗೇ ಕೂತಿದ್ದ ಹೊನ್ನಟ್ಟಾಲಯ್ಯನಿಗೆ ಅಡವಪ್ಪನ ಮೌನ ಇರಿಸುಮುರಿಸು ಅನಿಸತೊಡಗಿತು. ಅಂತೆಯೇ ಮುದ್ದಾಂ ಮುಖಮುರಿಸಿಕೊಂಡಂತಾಗಿ ಎದ್ದವನೇ ಎದುರಿಗಿದ್ದ ಕಾಡು ತುಳಸಿ ಗಿಡದ ಹತ್ತಿರಕ್ಕೆ ನಡೆದು ಅದರ ಒಂದೆರಡು ಎಲೆಗಳನ್ನು ಕಿತ್ತು ಬಾಯಿಗಾಕಿಕೊಂಡು ಮತ್ತೆ ಅಡವಪ್ಪನತ್ತ ನೋಡಿದ. ಬೆಳಗಿನ ಪೂಜೆಗೆಂದು ಮಡಿಯುಟ್ಟು ಅರೆಬೆತ್ತಲಿನಲ್ಲಿದ್ದ ಅಡವಪ್ಪ ಕೊರಳಿಗೆ ನೇತಾಕಿಕೊಂಡಿದ್ದ ಕರಡಿಗೆಯ ದಾರವನ್ನು ಮೆಲ್ಲಗೆ ತೀಡಿಕೊಳ್ಳುತ್ತಾ ಪಡಸಾಲೆಯ ಕುರ್ಚಿಯಲ್ಲಿ ಕೂತಿದ್ದ. ಅಗಲ ಹೊಳ್ಳೆಗಳ ಗೆಡ್ಡೆ ಮೂಗಿನ ಸದಾ ಕೆಂಪಗಿರುತ್ತಿದ್ದ ದಡಿ ಕಣ್ಣುಗುಡ್ಡೆಗಳ ಮೀಸೆಯಿರದ ಅವನ ದುಂಡನೆಯ ಮೊಗದಲ್ಲಿ ಅವಮಾನದ ಬಳ್ಳಿಯೊಂದು ಬಲಿಯತೊಡಗಿತ್ತು.

ಒಂದಷ್ಟೊತ್ತು ಹಾಗೆ ಕರಡಿಗೆಯನ್ನು ನೀವಿಕೊಳ್ಳುತ್ತಿದ್ದ ಅಡವಪ್ಪ ಇದ್ದಕ್ಕಿದ್ದಂತೆ ವಲ್ಲಿಯೊಂದನ್ನು ಹೆಗಲಿಗಾಕಿಕೊಂಡು ಹೊಳೆಬಾಗಿಲನ್ನು ದಾಟಿ ಮನೆಯ ಎಡಕ್ಕಿದ್ದ ಕಾಡು ಕಲ್ಲಿನ ಮೆಟ್ಟಿಲುಗಳನ್ನಿಳಿಯತೊಡಗಿದ. ಹೊನ್ನಟ್ಟಾಲಯ್ಯನಿಗೆ ಅಡವಪ್ಪ ತನ್ನನ್ನು ನಡೆಸಿಕೊಳ್ಳುತ್ತಿರುವ ರೀತಿ ಅಸಹಜ ಅನಿಸಿ ಕುಗ್ಗಿ ಹೋದರೂ ಆದರಾ ಚಣದಲ್ಲಿ ಅದನ್ನು ಎತ್ತಾಡಿ ಸಣ್ಣವನಾಗಲಿಚ್ಛೆಸದೆ ಒಂದು ಚಣ ಬಿಟ್ಟು ಅವನೂ ಹೊಳೆಬಾಗಿಲಿನವರೆಗೂ ನಡೆದು ಅಲ್ಲಿ ನಿಂತು ನೋಡಿದ. ಆಟೊತ್ತಿಗಾಗಲೇ ಮೆಟ್ಟಿಲುಗಳನ್ನಿಳಿದು ತೋಟದ ಬೇಲಿಯನ್ನು ದಾಟುತ್ತಿದ್ದ ಅಡವಪ್ಪ ಪಾತಾಳಲೋಕದ ಜೀವಿಯಂತೆ ಕಾಣತೊಡಗಿದ. ಅತ್ತ ನೋಡಲು ಚಿತ್ತ ಬಾರದೆ ಮತ್ತೆ ಮನೆಯತ್ತ ತಿರುಗಿದ. ಅಂಬು ಅಂಟಿಕೊಂಡಿದ್ದ ನುಗ್ಗೆಯ ಮರದ ತುದಿಯಲ್ಲಿ ಕಟ್ಟಿದ್ದ ಇರುಳಿಡೀ ಸುರಿದ ಕಾವಳಕ್ಕೆ ನೆಂದು ತೊಪ್ಪೆಯಾಗಿದ್ದ ಕೆಂಪು ಬಾವುಟವೊಂದು ಬಿಸಿಲಿನಲ್ಲಿ ಮೈ ಒಣಗಿಸಿಕೊಳ್ಳುತ್ತಿತ್ತು.

ಅಡವಪ್ಪನೊಳಗೆ ತನ್ನ ಮಾತುಗಳು ಮಾಡಿರಬಹುದಾದ ಘಾಸಿಯನ್ನು ಮನದಲ್ಲಿ ಎಣಿಸುತ್ತಲೇ ಹೊನ್ನಟ್ಟಾಲಯ್ಯ ಅಡವಪ್ಪನನ್ನೇ ಹಿಂಬಾಲಿಸಿದ. ಒಂದು ವೇಳೆ ತಾನಾ ಸಂಗತಿಯನ್ನವನಿಗೆ ಅರುಹದೇ ಹೋಗಿದ್ದರೆ ಆಟೊತ್ತಿಗಾಗಲೇ ಅಡವಪ್ಪ ಧನುರ್ಮಾಸದ ಬೆಳಗಿನ ಪೂಜೆಯನ್ನು ಮುಗಿಸಿ ಊರಾಚೆಯ ಶಂಭುಲಿಂಗೇಶ್ವರ ದೇವಸ್ಥಾನದ ಪ್ರಾಂಗಣದ ಧ್ಯಾನದ ಗುಂಪಿನಲ್ಲಿ ಒಬ್ಬನಾಗಿಬಿಟ್ಟಿರುತ್ತಿದ್ದ. ಸುದ್ದಿ ತಿಳಿದಾಗಿನಿಂದ ಅಡವಪ್ಪ ಕಲ್ಲಾಗಿಬಿಟ್ಟಿರುವುದನ್ನು ಕಂಡು ಹೊನ್ನಟ್ಟಾಲಯ್ಯನಿಗೆ ತಾನದನ್ನವನಿಗೆ ಹೇಳಬಾರದಿತ್ತು, ಅದಾಗೇ ಗೊತ್ತಾಗುವವರೆಗೂ ತೆಪ್ಪಗಿರಬೇಕಿತ್ತು ಅಂತ ಒಂದು ಚಣ ಅನಿಸಿ ಕಸಿವಿಸಿಗೊಂಡ. ಹೇಳದೇ ಇದ್ದರೆ ತನ್ನ ಅನುದಿನದ ಗೆಣೆಕಾರನಿಗೆ ದ್ರೋಹ ಬಗೆದಂತಾಗುತ್ತಿತ್ತು ಅಂತನಿಸಿ ತಂತಾನೇ ಸಂತೈಸಿಕೊಳ್ಳುತ್ತಾ ಲಕ್ವ ಹೊಡೆದಿದ್ದ ಬಲಗಾಲನ್ನು ಎಳೆದುಕೊಂಡು ಬಲಗೈಯ್ಯ ಮುಷ್ಟಿಯನ್ನು ಎಡಗೈಯ್ಯಿನಿಂದ ಆತಿಡಿದುಕೊಂಡು ಸರಪರ ಅಂತ ಸದ್ದು ಮಾಡಿಕೊಂಡು ನಡೆಯಹತ್ತಿದ. ಹೊನ್ನಟ್ಟಾಲಯ್ಯ ತನ್ನನ್ನು ಹಿಂಬಾಲಿಸುತ್ತಿದ್ದದ್ದು ಅಡವಪ್ಪನಿಗೆ ತಿಳಿದರೂ ತಿರುಗಿ ನೋಡುವ ಗೋಜಿಗೋಗದೆ ಬಾರೆಯ ದಾರಿಯಲ್ಲಿ ನಡೆದು ಅದು ಅಖೈರಾಗುತ್ತಲೇ ಅದಕ್ಕೆ ತಲುಪಾಕಿಕೊಂಡಿದ್ದ ಕಾಡು ಜಾಡೊಂದನ್ನಿಡಿದು ಅಲ್ಲಿಂದ ಒಂದಷ್ಟು ದೂರದಲ್ಲಿದ್ದ ಊರವರ ಬಾಯಲ್ಲಿ 'ಕೋಡ್ಗಲ್ಲು' ಅಂತ ಕರೆಯಲ್ಪಡುತ್ತಿದ್ದ ಎರಡಾಳೆತ್ತರದ ಕೊಂಬಿನಂತೆ ಎಡಕ್ಕೆ ವಾಲಿದ್ದ ಬಂಡೆಯೊಂದನ್ನು ಏರಿ ಕೂತುಬಿಟ್ಟ.

## 2

ಮಗ ಶಂಭುಲಿಂಗನಿಗೂ ಅಪ್ಪ ಅಡವಪ್ಪನಿಗೂ ಉಯ್ದಕ್ಕಿ ಬೇಯಲ್ಲ ಎಂಬುದು ಊರೂರಿಗೇ